**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್.ನಗರ**

**ಸಿಸಿ ನಂ. 16/2025**

**ಪಿರ್ಯಾದುದಾರರು:** ಶ್ರೀ ಕಾಂತರಾಜು.ಕೆ.ಬಿ ಬಿನ್ ಲೇಟ್ ಬಸವೇಗೌಡ,

**--ವಿರುದ್ಧ –**

**ಆರೋಪಿ:** ಶ್ರೀ ಪ್ರದೀಪ್ ಆರ್.ಸಿ ಬಿನ್ ಆರ್.ಸಿ.ಚಂದ್ರೇಗೌಡ,

**:ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 355 ರಡಿಯಲ್ಲಿ ಆರೋಪಿಯ ಹೇಳಿಕೆ:**

ಪ್ರಶ್ನೆ-1 ಫ್ರಾಸಾ-1 ಶ್ರೀ ಕಾಂತರಾಜು.ಕೆ.ಬಿ ಬಿನ್ ಲೇಟ್ ಬಸವೇಗೌಡ, ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯಾದ ನೀವು ಫ್ರಾಸಾ-1 ರವರಿಗೆ ರೂ.2,00,000/- ಹಣವನ್ನು ಕಾನೂನು ಬದ್ಧವಾಗಿ ಕೊಡಬೇಕಾಗಿದ್ದು, ಅದರ ಮರು ಪಾವತಿಗಾಗಿ ನಿಮ್ಮ ಉಳಿತಾಯ ಖಾತೆ ಇರುವ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಗೆ,** ಸೇರಿದ ಚೆಕ್ ಸಂಖ್ಯೆ 729636 **ದಿನಾಂಕ:** 21.11.2024 ವನ್ನು ನಮೂದಿಸಿ ಕೊಟ್ಟಿದ್ದೀರೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-2 ಫ್ರಾಸಾ-1 ಶ್ರೀ ಕಾಂತರಾಜು.ಕೆ.ಬಿ ಬಿನ್ ಲೇಟ್ ಬಸವೇಗೌಡ, ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯಾದ ನೀವು ಫ್ರಾಸಾ-1 ರವರು, ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು, ತಮ್ಮ ಉಳಿತಾಯ ಖಾತೆ ಇರುವ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆ ಆರ್ ನಗರ ಶಾಖೆ,** ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು **"ಸಾಕಷ್ಟು ಹಣವಿಲ್ಲ"** ಎಂಬ ಹಿಂಬರಹದೊಂದಿಗೆ ದಿನಾಂಕ: 07.12.2024 ರಂದು ಚೆಕ್ಕು ಹಿಂದಿರುಗಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-3 ಫ್ರಾ.ಸಾ.-1 ಶ್ರೀ ಕಾಂತರಾಜು.ಕೆ.ಬಿ ಬಿನ್ ಲೇಟ್ ಬಸವೇಗೌಡ, ರವರು ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯಾದ ನೀವು ಫ್ರಾಸಾ-1 ರವರು, ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಅವರು ತಮ್ಮ ವಕೀಲರ ಮುಖಾಂತರ ಆರೋಪಿಯಾದ

ನಿಮಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ: 09.12.2024 ರಂದು ತಿಳುವಳಿಕೆ ಪತ್ರ ಕಳುಹಿಸಿದರೂ ಸಹ ನೀವು ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ4 ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?
ಉತ್ತರಃ

ಪ್ರಶ್ನೆಃ 5 ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ?
ಉತ್ತರಃ

(ಮೇಲ್ಕಂಡ ಆರೋಪದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿದ ಉತ್ತರಗಳನ್ನು ಸ್ವತಃ ನಾನೇ ಕೇಳಿಸಿಕೊಂಡು ನನ್ನ ಸ್ವ ಬರವಣಿಗೆಯಲ್ಲಿ ಉತ್ತರಗಳನ್ನು ನಮೂದು ಮಾಡಿರುತ್ತೇನೆ ಇವು ಆರೋಪಿ ತನ್ನ ಸ್ವಇಚ್ಛೆಯಿಂದ ನೀಡಿರುವ ಉತ್ತರಗಳಾಗಿರುತ್ತವೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

**ದಿನಾಂಕಃ** 22.11.2025

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆ ಆರ್ ನಗರ.**